ಕೊಂಡು ಜಿಲ್ಲಾ ಕೇಂದ್ರ ಮಾಡಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ: ಪರಿಶೀಲನೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

4. ವಿಷಯ :- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇರು ಅಭಿವೃದ್ಧಿ ನಿಗಮದ ವತಿಯಿಂದ ಎಂಡೋಸಲ್ಫಾನ್ ಕೀಟನಾಶಕ ಸಿಂಪಡಣೆಯಿಂದಾಗಿ ಅಲ್ಲಿನ ಜನರು ಮಾರಕ ರೋಗಗಳಿಗೆ ತುತ್ತಾಗಿ ಬಳಲುತ್ತಿರುವ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಕೊಕ್ಕಡ ಹೋಬಳಿಯ ಕೊಕ್ಕಡ, ಪಟ್ರಮೆ,ನಿಡ್ಲೆ, ಪರಿಸರ ಗ್ರಾಮಗಳಲ್ಲಿ ಮತ್ತು ಪುತ್ತೂರು ತಾಲೂಕಿನ ಕೋಣಾಲು, ಗೋಳಿತೊಟ್ಟು, ಕೌಕ್ರಾಡಿ, ಹಾಗೂ ಅಲಂಕಾರು ಗ್ರಾಮಗಳಲ್ಲಿ 1982–2002ರವರೆಗೆ ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ವತಿಯಿಂದ ಅವರಿಗೆ ಸೇರಿದ ಗೇರು ತೋಟಗಳಲ್ಲಿ ರಾಸಾಯನಿಕ ಔಷಧಿ (ಎಂಡೋಸಲ್ಫಾನ್)ಯನ್ನು ಹೆಲಿಕಾಪ್ಟರ್ ಮೂಲಕ ಸಿಂಪಡಣೆ ಮಾಡಲಾಗಿದ್ದು,ಅದರ ಪರಿಣಾಮವಾಗಿ ಸದ್ರಿ ಗ್ರಾಮಗಳ ಹಾಗೂ ಪರಿಸರದ ಜನರು ಅಂಗವಿಕಲತೆ, ಮೂರ್ಛೆರೋಗ, ಕ್ಯಾನ್ಸರ್, ಪಾರ್ಶ್ವವಾಯು, ಬಂಜೆತನ, ಗರ್ಭಪಾತಗಳು ಹಾಗೂ ಇನ್ನಿತರ ಖಾಯಿಲೆಗಳನ್ನು ಹೊಂದಿದ್ದು, ಗ್ರಾಮಸ್ಥರು ತಮಗಾದ ನೋವುಗಳ ಬಗ್ಗೆ ಮೇಲಾಧಿಕಾರಿಗಳ ಹಾಗೂ ಸರಕಾರಕ್ಕೆ ಪರಿಹಾರ ಹಾಗೂ ಮಾಸಾಶನಕ್ಕೆ ಅರ್ಜಿ ಸಲ್ಲಿಸಿದ್ದರು.

ಪ್ರಸ್ತಾವಿತ ಅರ್ಜಿದಾರರುಗಳು ಸಲ್ಲಿಸಿರುವ ಅರ್ಜಿ ಹಾಗೂ ಸರ್ಕಾರದ ಆದೇಶದಂತೆ ದಿನಾಂಕ:31–08–2009 ಮತ್ತು 01–09–2009ರಲ್ಲಿ ತಜ್ಞ ವೈದ್ಯರ ತಂಡದ ಮೂಲಕ ಮತ್ತು 10–02–2010ರಂದು ಗ್ರಾಮಕರಣಿಕರು, ಆರೋಗ್ಯ ಸಹಾಯಕಿಯರು, ಪಂಚಾಯತಿ

ಕಾರ್ಯದರ್ಶಿಗಳೊಂದಿಗೆ ಜಂಟಿಯಾಗಿ ಸಮೀಕ್ಷೆ ನಡೆಸಿ, ಸಂತ್ರಸ್ಥರ ವಿವರ ಪಡೆಯಲಾಗಿತ್ತು. ಆರೋಗ್ಯ ಇಲಾಖಾವತಿಯಿಂದ ಆಗಾಗ ಆರೋಗ್ಯ ತಪಾಸಣಾ ಶಿಬಿರಗಳು ನಡೆಯುತ್ತಿದ್ದು, ದಿನಾಂಕ:18–02–2010, 19–02–2010 ಮತ್ತು 20–2–2010 ರಂದು ವಿಶೇಷ ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸಿ, ಅಂಗವಿಕಲತೆ ಹೊಂದಿದವರ ಶೇಕಡಾವಾರು ಅಂಗವಿಕಲತೆ ಪ್ರಮಾಣವನ್ನು ವೈದ್ಯಾಧಿಕಾರಿಗಳು ನೀಡಿರುತ್ತಾರೆ,

ಒಟ್ಟು 75%ಕ್ಕಿಂತ ಜಾಸ್ತಿ ಅಂಗವಿಕಲತೆ ಹೊಂದಿದವರು 128 ಮಂದಿ 40% ರಿಂದ 75%ರ ಅಂಗವಿಕಲತೆ ಹೊಂದಿದವರು 102 ಜನ ಅಂಗವಿಕಲತೆ ಹೊಂದಿದವರನ್ನು ಗುರುತಿಸಿ, ಅಂಗವಿಕಲತೆ ಪ್ರಮಾಣ ಪತ್ರವನ್ನು ವೈದ್ಯಾಧಿಕಾರಿಗಳು ನೀಡಿರುತ್ತಾರೆ.

ದಿನಾಂಕ:19–06–2011ರಂದು ಕೊಕ್ಕಡ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯ ಸಮುದಾಯ ಭವನದಲ್ಲಿ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆಯ ಮುಖಾಂತರ Day-Care-Centre ಉದ್ಘಾಟನೆ–ಗೊಂಡಿದ್ದು, ಸದ್ರಿ Day-Care-Centre, (ಸಂತ್ರಸ್ತರಿಗೆ ಪುನರ್ವಸತಿ ಕೇಂದ್ರ)ನಲ್ಲಿ ಎಂಡೋಸಲ್ಫಾನ್ ಪೀಡಿತ ಪ್ರದೇಶದ ಮಕ್ಕಳು ಸೌಲಭ್ಯವನ್ನು ಪಡೆಯುತ್ತಿದ್ದಾರೆ, ಅಲ್ಲದೇ ಕೊಕ್ಕಡ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ದಿ:08–07–2011 ಮತ್ತು 15–07–2011ರಂದು ವಿಶೇಷ ಆರೋಗ್ಯ ತಪಾಸಣೆ ನಡೆಸಿ, 145 ಜನರು ಅಂಗವಿಕಲ ಪ್ರಮಾಣ ಪತ್ರವನ್ನು ಪಡೆದಿರುತ್ತಾರೆ.

ದಿನಾಂಕ:10–10–2012 ರಿಂದ 31–10–2012ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಬಂಟ್ವಾಳ,ಪುತ್ತೂರು ಮತ್ತು ಸೂಳ್ಯ ಈ ನಾಲ್ಕು ತಾಲೂಕುಗಳಲ್ಲಿ ಎಂಡೋಸಲ್ಫಾನ್ ಸಂತ್ರಸ್ತರ ಪ್ರಾಥಮಿಕ ಹಂತದ ಸಮೀಕ್ಷೆ ಕಾರ್ಯ ಮುಗಿದಿದ್ದು ಸಮೀಕ್ಷೆಯಲ್ಲಿ 103 ಗ್ರಾಮಗಳಲ್ಲಿ 5221 ಎಂಡೋಸಲ್ಫಾನ್ ಸಂಭಂದಿತ ಕಾಯಿಲೆಯವರನ್ನು 179 ಸಂಪೂರ್ಣ ಹಾಸಿಗೆ ಹಿಡಿದವರನ್ನು ಕಂಡುಹಿಡಿಯಲಾಯಿತು. ಇವರುಗಳನ್ನು ತಜ್ಞವೈದ್ಯರಿಂದ ಪರೀಕ್ಷಿಸಿ ಅಂಗವಿಕಲ ಹಾಗೂ ಸ್ಮಾರ್ಟ ಕಾರ್ಡ್ ವಿತರಿಸುವ ಸಲುವಾಗಿ ದಿನಾಂಕ:5–12–2012ರಿಂದ 8–12–2012 ವರೆಗೆ ತಜ್ಞವೈದ್ಯರ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ.

ದ.ಕ.ಜಿಲ್ಲೆಯಲ್ಲಿ ಇಲ್ಲಿಯವರೆಗೆ ಸಮೀಕ್ಷೆ ನಡೆಸಿದ ಪ್ರಕಾರ ಎಂಡೋಸಲ್ಫಾನ್ ಕೀಟನಾಶಕ ಬಳಕೆಯಿಂದ ಅಗಿರಬಹುದಾದಂತಹ ಸಂಶಯಿತ ಪ್ರಕರಣಗಳು:

	ಶೇಕಡಾ75 ಮತ್ತು ಹೆಚ್ಚು ಅಂಗವಿಕಲತೆ ಇರುವವರ ಸಂಖ್ಯೆ	ಶೇಕಡಾ 40 ರಿಂದ 70% ಅಂಗವಿಕಲತೆ ಇರುವವರ ಸಂಖ್ಯೆ	ಒಟ್ಟು
ದಿನಾಂಕ: 18,19, ಮತ್ತು 20 ಫೆಬ್ರವರಿ 2009	128	102	230
ದಿನಾಂಕ:8ಮತ್ತು 15 ಜುಲೈ2011	90	55	145
ದಿನಾಂಕ: 21ಸೆಪ್ಟಂಬರ್2012	101	34	135
ದಿನಾಂಕ: 10–10–2012ರಿಂದ ದಿನಾಂಕ: 30–10–2012	ಪ್ರಾಥಮಿಕ ಹಂತದಲ್ಲಿ 5223 ಎಂಡೋಸಲ್ಫಾನ್ ಶಂಕಿತ ಪ್ರಕರಣಗಳನ್ನು ಗುರುತಿಸಲಾಗಿದೆ.ಇದರಲ್ಲಿ ತಜ್ಞವೈದ್ಯರ ತಪಾಸಣೆಗೆ ಒಳಪಡಿಸಲು ದಿ:05–12–2012 ರಿಂದ 8–12–2012ರವರೆಗೆ 10 ವಿಶೇಷ ವೈದ್ಯರ ಶಿಬಿರ ಏರ್ಪಡಿಸಲಾಗಿದೆ.		

ಎಂಡೋಸಲ್ಫಾನ್ ಕೀಟನಾಶಕ ಬಳಕೆಯಿಂದ ಅಂಗವೈಕಲ್ಯತೆ ಮತ್ತು ಬುದ್ದಿಮಾಂದ್ಯತೆಯ ಸಂಶಯಿತ ಪ್ರಕರಣಗಳ ಒಟ್ಟು ಸಂಖ್ಯೆ: 5733

ಇಂತಹ ಸಂಶಯಿತ ಪ್ರಕರಣಗಳಲ್ಲಿ ಎಂಡೋಸಲ್ಫಾನ್ ಕೀಟನಾಶಕ ಬಳಕೆಯೇ ಕಾರಣವೆಂದು ನಿಖರವಾಗಿ ಧೃಢಪಡಿಸಲಾಗಿಲ್ಲ. ದೃಢಪಡಿಸದೇ ಇರಲು ಕಾರಣವೇನೆಂದರೆ ತಜ್ಞ ವೈದ್ಯರಿಂದ ಸಂಶೋಧನೆಯ ಹಂತದಲ್ಲಿರು–ವುದರಿಂದ ಈ ಬಗ್ಗೆ ಯಾವುದೇ ವರದಿ ಬಂದಿರುವುದಿಲ್ಲ.

ಎಂಡೋಸಲ್ಫಾನ್ ಕ್ರೀಮಿನಾಶಕದ ಬಳಕೆಯನ್ನು ನಿಷೇಧಿಸುವುದು ರಾಜ್ಯ ಸರ್ಕಾರದ ನಿಲುವಾಗಿರುತ್ತದೆ. ಮಾನ್ಯ ಭಾರತ ಸರ್ವೋಚ್ಚ ನ್ಯಾಯಾಲಯದ ಮಧ್ಯಂತರ ಆದೇಶದ ಪ್ರಕಾರ ಎಂಡೋಸಲ್ಫಾನ್ ಕೀಟನಾಶಕದ ತಯಾರಿಕೆ, ಬಳಕೆ ಹಾಗೂ ಮಾರಾಟವನ್ನು ರಾಜ್ಯಾದ್ಯಂತ ನಿಷೇಧಿಸಲಾಗಿದೆ.

ಅಧ್ಯಕ್ಷರು : Clarification ಕೇಳಿ.

ಶ್ರೀ ಸಿದ್ದರಾಮಯ್ಯ : ನಿಮ್ಮ ಉತ್ತರವನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಎಂಡೋಸಲ್ಫಾನ್ ಸಿಂಪಡಿಸಿದ್ದಾರೆ, ಅದರಿಂದ ದೊಡ್ಡ ಅನಾಹುತ ಆಗಿದೆ, ಬುದ್ಧಿಮಾಂದ್ಯತೆಗೆ ಒಳಗಾಗಿದ್ದಾರೆ, ಗರ್ಭಪಾತ ಆಗಿದೆ, ಮೂರ್ಛೆ ರೋಗ ಬಂದಿದೆ, ಅಂಗವಿಕಲತೆ ಇವೆಲ್ಲಾ ಆಗಿದೆ ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಅವರಿಗೆ ಪರಿಹಾರ ಕೊಡುವಂಥ ಕೆಲಸವನ್ನು ಇವತ್ತಿನವರೆಗೂ ಮಾಡಿಲ್ಲ. ವೈದ್ಯರುಗಳ ಬಳಿ ಪರೀಕ್ಷೆ ಮಾಡಿಸಿದ್ದಾರೆ. ಆ ವೈದ್ಯರ ವರದಿ ಇನ್ನೂ ಬಂದಿಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ. ಎಷ್ಟು ಜನರಿಗೆ ಪರೀಕ್ಷೆ ಮಾಡಿಸಿದ್ದೀರಿ, ಎಷ್ಟು ಜನರಿಗೆ ತೊಂದರೆಯಾಗಿದೆ ಎನ್ನುವುದನ್ನು ರಿಪೋರ್ಟ್‌ನಲ್ಲಿ ನೀಡಿದ್ದೀರಿ. ಇದನ್ನು ಒಪ್ಪಿಕೊಂಡ ಮೇಲೂ ಕೂಡ ಕೇರಳದಲ್ಲಿ ಈ ರೀತಿಯ ಸಂತ್ರಸ್ಥರು ಯಾರ್ಯಾರಿದ್ದಾರೋ ಅವರುಗಳಿಗೆಲ್ಲಾ ಪರಿಹಾರ ಕೊಟ್ಟಿದ್ದಾರೆ. ಬೇರೆ ಬೇರೆ ಸವಲತ್ತುಗಳನ್ನು ಕೊಟ್ಟಿದ್ದಾರೆ. ಕರ್ನಾಟಕದಲ್ಲೂ ಏಕೆ ಕೊಡಬಾರದು? ಆದ್ದರಿಂದ ನಾನು ಒತ್ತಾಯ ಮಾಡುತ್ತಿದ್ದೇನೆ, ಕೇರಳ ಸರ್ಕಾರದಲ್ಲಿ ಯಾವ ರೀತಿ ಪರಿಹಾರ ಕೊಟ್ಟಿದ್ದಾರೆ, ಅದೇ ರೀತಿ ಇಲ್ಲಿಯೂ ಕೂಡ ಯಾರ್ಯಾರು ಈ ಕಾರಣದಿಂದ ಸಂತ್ರಸ್ತರಾಗಿದ್ದಾರೆ ಅವರಿಗೆ ಪರಿಹಾರ ಕೊಡಬೇಕು. ಇದು ಅವರ ತಪ್ಪಿನಿಂದ ಆಗಿರುವಂಥದಲ್ಲ, ಸರ್ಕಾರ ಗೇರು ಬೀಜಕ್ಕೆ ಎಂಡೋಸಲ್ಫಾನ್ ಔಷಧಿ ಸಿಂಪಡಿಸಿರುವುದರಿಂದ ಆಗಿರುವುದು. ನೀವು ಮಾಡಿರುವ ತಪ್ಪಿಗೆ ಜನರು ಅಂಗವಿಕಲತೆಯನ್ನು ಅನುಭವಿಸುತ್ತಿದ್ದಾರೆ. ಅದಕ್ಕೆ ಕೇರಳದಲ್ಲಿ ಯಾವ ರೀತಿ ಪರಿಹಾರ ಕ್ರಮ ಕೈಗೊಂಡಿದ್ದಾರೆಯೋ ಆ ವರದಿಯನ್ನು ತರಿಸಿಕೊಂಡು ಇಲ್ಲಿನ ಸಂತ್ರಸ್ತರಿಗೂ ಕೂಡ ಅದೇ ರೀತಿ ಪರಿಹಾರ ಕೊಡುವ ಪ್ರಯತ್ನ ಮಾಡಬೇಕು. ಅದನ್ನು ಬಿಟ್ಟು ಇನ್ನೂ ನಮಗೆ ವರದಿ ಬಂದಿಲ್ಲ, ವರದಿ ಬಂದ ಮೇಲೆ ವಿಚಾರ ಮಾಡುತ್ತೇವೆ ಎಂದು ಹೇಳಿದರೆ

ಸರಿ ಕಂಡು ಬರುವುದಿಲ್ಲ. ಎಷ್ಟು ದಿನಗಳಾಗಿವೆ, ಆಗಲೇ ೨೦೦೯ನೇ ಇಸವಿಯಿಂದ ತನಿಖೆ ನಡೆಸುತ್ತಲೇ ಇದ್ದಾರೆ. ಆದ್ದರಿಂದ ನಾನು ನಿಮ್ಮ ಮೂಲಕ ಅವರಿಗೆ ಒತ್ತಾಯ ಮಾಡುತ್ತೇನೆ. ಈ ವಿಷಯ ೩ ಇಲಾಖೆಯನ್ನು ನೋಡಿಕೊಂಡು ಬಂದಿದೆ. ಮೊದಲು ತೋಟಗಾರಿಕೆ ಇಲಾಖೆಗೆ ಹೋಯಿತು, ನಂತರ ಮತ್ತೊಂದು ಇಲಾಖೆಗೆ, ನಂತರ ಆರೋಗ್ಯ ಇಲಾಖೆಗೆ ಕಳುಹಿಸಿದ್ದಾರೆ. Actually, ಇದು ಆರೋಗ್ಯ ಇಲಾಖೆಗೆ ಸಂಬಂಧಪಟ್ಟಿರುವಂಥದ್ದಲ್ಲ. ಆರೋಗ್ಯ ಇಲಾಖೆಯಿಂದ ನೀವು ಶುಶ್ರೂಷೆ, ಚಿಕಿತ್ಸೆ ಕೊಡಿಸಿದ್ದೀರಿ. ಇದಕ್ಕೆ ತೋಟಗಾರಿಕಾ ಇಲಾಖೆಯವರು ಪರಿಹಾರ ಕೊಡಬೇಕಾಗಿರುವುದು. ತೋಟಗಾರಿಕಾ ಇಲಾಖೆಯಲ್ಲಿ ಗೇರು ಅಭಿವೃದ್ಧಿ ಮಂಡಳಿ ಬರುತ್ತದೆ. ಅವರ ಮುಖಾಂತರ ಸರ್ಕಾರ ಮಾಡಿಸಿರುವುದು.

ಅಧ್ಯಕ್ಷರು : ಗೇರು ಅಭಿವೃದ್ಧಿ ಮಂಡಳಿ Forest Departmentಗೆ ಬರುತ್ತದೆ.

ಶ್ರೀ ಸಿದ್ದರಾಮಯ್ಯ : ನೋಡಿ, ಈಗ Forest Departmentಗೆ ಹೋಗಿಬಿಟ್ಟಿದೆ.

ಅಧ್ಯಕ್ಷರು : Forest Department ನವರಿಗೇ ಬರುವುದು.

ಶ್ರೀ ಸಿದ್ದರಾಮಯ್ಯ : ಅದು Plantation Crop ಅಲ್ಲವೇ?

ಅಧ್ಯಕ್ಷರು : ಹೌದು.

ಶ್ರೀ ಬಿ.ಎನ್.ಬಚ್ಚೇಗೌಡ : ತಾವು ಹೇಳಿದಂತೆ ಆರೋಗ್ಯದ ದೃಷ್ಟಿಯಿಂದ ಆರೋಗ್ಯ ಇಲಾಖೆಗೆ ಬಂದಿದೆ.

ಶ್ರೀ ಸಿದ್ದರಾಮಯ್ಯ : ಯಾರಾದರೂ ಆಗಲಿ, ಸರ್ಕಾರ.

ಶ್ರೀ ಬಿ.ಎನ್.ಬಚ್ಚೇಗೌಡ : ಫಾರೆಸ್ಟ್ ಇಲಾಖೆಗೆ Plantation crop, ಕಾಫಿ, ಗೇರು ಬೀಜ ಬರುತ್ತದೆ.

ಶ್ರೀ ಸಿದ್ದರಾಮಯ್ಯ : ನನ್ನ ಪ್ರಕಾರ ತೋಟಗಾರಿಕಾ ಇಲಾಖೆ ಎಂದು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು : ಗೇರು ಅಭಿವೃದ್ಧಿ ನಿಗಮ ಅರಣ್ಯ ಇಲಾಖೆ controlನಲ್ಲಿದೆ.

ಶ್ರೀ ಸಿದ್ದರಾಮಯ್ಯ : ಅರಣ್ಯ ಇಲಾಖೆಯವರ ಕಂಟ್ರೋಲ್-ನಲ್ಲಿದೆಯೇ? ಅವರೂ ಸಹ ಬೇಡ ಎಂದು ಕಳುಹಿಸಿಬಿಟ್ಟಿದ್ದಾರೆ. ಎಲ್ಲರೂ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ತೋಟಗಾರಿಕೆಯವರು ಅರಣ್ಯ ಇಲಾಖೆಗೆ, ಅರಣ್ಯ ಇಲಾಖೆಯವರು ಆರೋಗ್ಯ ಇಲಾಖೆಗೆ, ಆರೋಗ್ಯ ಇಲಾಖೆಯವರು ನಾವು ತಪಾಸಣೆ ಮಾಡಿದ್ದೇವೆ, ಔಷಧಿ ಕೊಟ್ಟಿದ್ದೇವೆ ಎಂದು ಅವರು ಕುಳಿತುಕೊಂಡುಬಿಟ್ಟಿದ್ದಾರೆ. So, the question is, ಒಟ್ಟಿನಲ್ಲಿ ಅಲ್ಲಿ ಯಾರ್ಯಾರು ಸಂತ್ರಸ್ತರಾಗಿದ್ದಾರೆ, ಈ ರೀತಿಯ ಅಂಗ-ವಿಕಲತೆ ಯಾರಿಗೆ ಆಗಿದೆ, ಯಾರು ಜೀವ ಕಳೆದುಕೊಂಡಿದ್ದಾರೆ, ಯಾರಿಗೆ permanent ಆಗಿ ಬದುಕುವುದಕ್ಕೆ ಸಾಧ್ಯವಿಲ್ಲವೆನ್ನುವ ಪರಿಸ್ಥಿತಿ ಆಗಿದೆ, ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲವೆನ್ನುವ ಪರಿಸ್ಥಿತಿ ಆಗಿದೆ, physical work ಮಾಡುವುದಕ್ಕೆ ಸಾಧ್ಯವಿಲ್ಲದಂತಾಗಿದೆ, ಅವರಿಗೆ ಪರಿಹಾರ ಕೊಡಬೇಕಲ್ಲ? ಸರ್ಕಾರ ಮಾಡಿರುವ ತಪ್ಪು ಇದು. ಕೃಷಿ ಇಲಾಖೆ ಮಾಡಬೇಕೆಂದು ನಮ್ಮ ಮಾಜಿ ಕೃಷಿ ಮಂತ್ರಿಗಳಾದ ಶ್ರೀ ಜಯಚಂದ್ರರವರು ಹೇಳುತ್ತಿದ್ದಾರೆ. ಆದಕಾರಣ ನೀವು ಪರಿಹಾರ ಕೊಡುವ ಕೆಲಸವನ್ನು ಮಾಡಬೇಕು. ಕೇರಳದಲ್ಲಿಯೂ ಇದೇ ರೀತಿಯಾಗಿದ್ದರಿಂದ ಕೇರಳ ಸರ್ಕಾರದವರು ಸಂತ್ರಸ್ತರಿಗೆ ಪರಿಹಾರ ಕೊಟ್ಟಿದ್ದಾರೆ. ಅವರು ಯಾವ ರೀತಿ ಪರಿಹಾರ ಕಾರ್ಯ ಮಾಡಿದ್ದಾರೆ ಅದೇ ರೀತಿ ಇಲ್ಲಿಯೂ ಆಗಬೇಕು. ಇಲ್ಲಿ ಕು.ಶೋಭಾ ಕರಂದ್ಲಾಜೆಯವರು ಶ್ರೀ ಯಡಿಯೂರಪ್ಪನವರನ್ನು ಕರೆದು-ಕೊಂಡು ಹೋಗಿ ಕೆಲವರಿಗೆ ರೂ.೫೦,೦೦೦/-ಗಳ ಪರಿಹಾರ ಕೊಡಿಸಿದ್ದಾರೆ. ಆದರೆ ಬೇರೆಯವರಿಗೆ ಕೊಟ್ಟಿಲ್ಲ. ಅದಕ್ಕೋಸ್ಕರ ಎಷ್ಟು ಜನರಿಗೆ ಪರಿಹಾರ ನೀಡಿದ್ದಾರೆ, ಏನೇನಾಗಿದೆ ಎನ್ನುವುದರ ವರದಿ ಬಂದಿದೆ. ಆ ವರದಿ ಆಧಾರದ ಮೇಲೆ ಪರಿಹಾರ ಕೊಡಬೇಕೆಂದು ನಿಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಇಲ್ಲದೆ ಹೋದರೆ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಡುವುದು ಒಳ್ಳೆಯದು.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಿಮ್ಮ ಭಾಗದಲ್ಲಿ ಈ ಘಟನೆಗಳು ನಡೆದಿರುವುದು.

ಶ್ರೀ ಸಿದ್ದರಾಮಯ್ಯ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಿರುವುದು, ಉತ್ತರವನ್ನು ಓದಿಬಿಟ್ಟರೆ ಆಗುವುದಿಲ್ಲ. ನಿಮ್ಮಿಂದ ಪರಿಹಾರ ಕೊಡುವುದಕ್ಕೆ ಆಗುವುದಿಲ್ಲ. ಆರೋಗ್ಯ ಇಲಾಖೆಯವರು ನೀವು ಪರಿಹಾರ ಕೊಡುತ್ತೀರಾ?

ಶ್ರೀ ಅರವಿಂದ ಲಿಂಬಾವಳಿ : ನಾನು ಮೊದಲು ಉತ್ತರ ಹೇಳುತ್ತೇನೆ. ನಾನು ಹೇಳಿದ ನಂತರ ನಮ್ಮಿಂದ ಪರಿಹಾರ ಕೊಡುವುದಕ್ಕೆ ಆಗುತ್ತದೆಯೋ ಇಲ್ಲವೋ ಎನ್ನುವುದನ್ನು ಹೇಳಿ.

ಶ್ರೀ ಸಿದ್ದರಾಮಯ್ಯ : ಆಯಿತು, ಉತ್ತರ ಹೇಳಿ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ಬಂದ ಮೇಲೆ ಎಂಡೋಸಲ್ಫಾನ್ ವಿಚಾರದ ಬಗ್ಗೆ ಬಹಳ ಗಂಭೀರವಾಗಿ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಭೆ ಆಗಿದೆ. ಇದಕ್ಕೆ ಸಂಬಂಧಪಟ್ಟಂತೆ ಆರೋಗ್ಯ ಇಲಾಖೆ, ಕಂದಾಯ ಇಲಾಖೆ, ಆರ್ಥಿಕ ಇಲಾಖೆ ಮತ್ತು ತೋಟಗಾರಿಕಾ ಇಲಾಖೆಗಳ ಸಂಬಂಧಪಟ್ಟಂಥ ಎಲ್ಲಾ ಅಧಿಕಾರಿಗಳ ಜೊತೆಗೆ, ಇದರ ಬಗ್ಗೆ ಸರ್ವೇಯನ್ನು ಕೂಡ ಮಾಡಲಾಗಿದೆ. ಸರ್ವೇ ಮಧ್ಯದಲ್ಲಿ ನಿಂತು ಹೋಗಿತ್ತು. ಈಗ ನಾನು ಮತ್ತು ಜಿಲ್ಲಾ ಉಸ್ತುವಾರಿ ಹಾಗೂ ಉನ್ನತ ಶಿಕ್ಷಣ ಸಚಿವರಾದ ಶ್ರೀ ಸಿ.ಟಿ.ರವಿಯವರು ಕೂಡಿ ಸರ್ವೇಯನ್ನು ಬೇಗ ಸಂಪೂರ್ಣಗೊಳಿಸಿ ಎಂದು ಒತ್ತಾಯ ಮಾಡಿದುದರ ಪರಿಣಾಮವಾಗಿ ಈಗ ೫೨೨೧ ಜನರ ಪಟ್ಟಿಯನ್ನು ನಮಗೆ ಸಲ್ಲಿಸಿದ್ದಾರೆ. ಕೊಕ್ಕಡ ಗ್ರಾಮಕ್ಕೆ ನಾನೂ ಕೂಡ ಭೇಟಿ ಕೊಟ್ಟಿದ್ದೇನೆ. ಅಲ್ಲಿ ನಾವು ಮಾಡಿರುವಂಥ Day Care Centreಗೆ ಹೋಗಿ ಅಲ್ಲಿಯ ಪರಿಸ್ಥಿತಿಗಳು ಏನು ಎನ್ನುವುದನ್ನು ಕೂಡ ಅರ್ಥ ಮಾಡಿಕೊಂಡು ಬಂದಿದ್ದೇನೆ. ಇದಾದ ನಂತರ ಕಂದಾಯ ಇಲಾಖೆಗೆ ಅದನ್ನು submit ಮಾಡಲಾಗಿದೆ. ಅಂಗವಿಕಲತೆ ಇರುವವರಿಗೆ ಮಾಸಾಶನ ಹೋಗುತ್ತಿದೆ. ಆ ಕುಟುಂಬಗಳನ್ನು ಏನು ಗುರುತು ಮಾಡಿದ್ದೇವೆ, ಕಂದಾಯ ಇಲಾಖೆ ಮುಖಾಂತರ ಅವರಿಗೆ ರೂ.೫೦,೦೦೦ಗಳ ಪರಿಹಾರಧನವನ್ನು ಕೊಡುತ್ತಿದ್ದಾರೆ. ಆದರೂ ಕೂಡ ಇದು ಸಾಕಾಗುವುದಿಲ್ಲವೆಂದು ನಮಗೂ ಗೊತ್ತಿದೆ. ಆ ಹಿನ್ನಲೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಸಲಹೆ ಕೊಟ್ಟಿದ್ದಾರೆ, ಕೇರಳ ಮಾದರಿಯಲ್ಲಿ ಕೊಡಬೇಕು ಎನ್ನುವುದರ ಬಗ್ಗೆ ಎರಡು

ಮಾತಿಲ್ಲ. ಕೇರಳದ ವಿವರಗಳನ್ನು ಕೂಡ ತರಿಸಿಕೊಳ್ಳುತ್ತಿದ್ದೇವೆ. ಆರೋಗ್ಯದ ದೃಷ್ಟಿಯಿಂದ Day care Centreನ್ನು convert ಮಾಡಿ Permanent Rehabilitation Centreನ್ನಾಗಿ ಮಾಡಬೇಕೆನ್ನುವುದರ ಬಗ್ಗೆಯೂ ಸರ್ಕಾರ ಚಿಂತನೆ ಮಾಡುತ್ತಿದೆ. ಈ ಸಮಸ್ಯೆ ಕೇವಲ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರವಲ್ಲ, ಉತ್ತರ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆ ಯಲ್ಲಿಯೂ ಕೂಡ ಈ ರೀತಿಯ ಸಮಸ್ಯೆಗಳಿರುವುದು ಗಮನಕ್ಕೆ ಬಂದಿದೆ. ಅಲ್ಲಿ ಕೂಡಾ ಸರ್ವೇ ಮಾಡಬೇಕು ಎನ್ನುವಂಥ ಸೂಚನೆಯನ್ನು ಎರಡೂ ಜಿಲ್ಲಾಧಿಕಾರಿಗಳಿಗೆ ಕಳುಹಿಸಿದ್ದೇವೆ. ಒಟ್ಟಾರೆ ಈ ಸಮಸ್ಯೆಗೆ ಪರಿಹಾರವನ್ನು ನೀಡಬೇಕು. ಏಕೆಂದರೆ ಅವರಿಗೆ ಬಂದಿರುವಂಥ ಅಂಗವಿಕಲತೆಗೆ ಪರಿಹಾರ ಸಿಗುತ್ತದೆ ಎನ್ನುವಂಥ ಪರಿಸ್ಥಿತಿ ಇಲ್ಲ. ವಾಪಸ್ಸು ಅವರು ಸುಸ್ಥಿತಿಗೆ ಬರುತ್ತಾರೆ ಎನ್ನುವಂಥ ಸ್ಥಿತಿಯಿಲ್ಲ. ಹೀಗಾಗಿ ಅವರನ್ನು ನೋಡಿಕೊಳ್ಳುವಂಥ ಪರಿಸ್ಥಿತಿಗೋಸ್ಕರ ಎನ್.ಜಿ.ಓ.ಗಳನ್ನು ಕೂಡ engage ಮಾಡಿ ಈ ರೀತಿಯ Rehabilitation Centre ಮಾಡಬೇಕೆಂದು ಕೂಡ ಇದೆ. ಆರೋಗ್ಯದ ದೃಷ್ಟಿಯಿಂದ ಅಲ್ಲಿರುವಂಥ ಆಸ್ಪತ್ರೆಗಳನ್ನು upgrade ಮಾಡಿ, ಉದಾಹರಣೆಗೆ ಕೊಕ್ಕಡ ಆಸ್ಪತ್ರೆಯನ್ನು upgrade ಮಾಡಿ C.H.C. ಮಾಡುವುದರ ಬಗ್ಗೆಯೂ ಸಹ ಸರ್ಕಾರ ಪರಿಶೀಲಿಸುತ್ತಿದೆ. ಆ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ಈ ವಿಷಯದ ಬಗ್ಗೆ ಬಹಳ serious ಆಗಿದೆ. ೩ ಜಿಲ್ಲೆಗಳ ವರದಿಯನ್ನು ತೆಗೆದುಕೊಂಡು ಕೇರಳ ಮಾದರಿಯ ಪರಿಹಾರಗಳನ್ನು ಕೊಡುವ ಬಗ್ಗೆಯೂ ಸರ್ಕಾರ ಚಿಂತನೆಯನ್ನು ಮಾಡುತ್ತಿದೆ.

ಶ್ರೀ ಸಿದ್ದರಾಮಯ್ಯ : ಕೇವಲ ಚಿಂತನೆ ಮೇಲೆ seriousness ಇರಬಾರದು.

ಶ್ರೀ ಅರವಿಂದ ಲಿಂಬಾವಳಿ : ಇದರ ಬಗ್ಗೆ ಸರ್ವೇನೇ ಆಗಿರಲಿಲ್ಲ.

ಶ್ರೀ ಸಿದ್ದರಾಮಯ್ಯ : ನಾನು ಏನು ಹೇಳುತ್ತಿದ್ದೇನೆಂದರೆ, ಮಂತ್ರಿ-ಗಳೇ ತಾವು ಒಂದು ನಿಮಿಷ ಕುಳಿತುಕೊಳ್ಳಿ. ಈ ಬಗ್ಗೆ ಸುಮಾರು ದಿನಗಳಿಂದ ಹೋರಾಟಗಳು ನಡೆಯುತ್ತಿವೆ. ಗೇರು ಅಭಿವೃದ್ಧಿ ನಿಗಮದವರು ಎಂಡೋಸಲ್ಫಾನ್‌ನ್ನು ಸಿಂಪಡಿಸಿರುವುದು.

ಗೇರು ಅಭಿವೃದ್ಧಿ ನಿಗಮದವರು ಎಂಡೋಸಲ್ಫಾನ್ ಔಷಧಿಯನ್ನು ಹೊಡೆಸಿದ್ದಾರೆ without knowing the consequences of it. ಅದರಿಂದಾಗಿ ಕೆಟ್ಟ ಪರಿಣಾಮ ಉಂಟಾಗಿದೆ. ಬಹಳ ಜನರು ಅಂಗ-ವಿಕಲತೆಗೆ ತುತ್ತಾಗಿದ್ದಾರೆ. ಕೆಲವರಿಗೆ ಕ್ಯಾನ್ಸರ್ ಬಂದಿದೆ. ಕೆಲವು ಹೆಣ್ಣುಮಕ್ಕಳಿಗೆ ಬಂಜೆತನ ಬಂದಿದೆ, ಗರ್ಭಪಾತವಾಗಿದೆ. ಕೆಲವರು physically handicapped ಆಗಿದ್ದಾರೆ. ಕೆಲವರು physically incapable ಆಗಿ, ಅವರಿಗೆ ಕೆಲಸ ಮಾಡಲಿಕ್ಕಾಗದ ಪರಿಸ್ಥಿತಿ ಉಂಟಾಗಿದೆ. So, ಇವೆಲ್ಲಾ ಆಗಿರುವುದರಿಂದ ಅವರಿಗೆ ಚಿಕಿತ್ಸೆ ಕೊಟ್ಟು rehabilitation ಮಾಡುವುದು ಒಂದು ಭಾಗವಾದರೆ, ಅವರಿಗೆ ಪರಿಹಾರ ಕೊಡತಕ್ಕದ್ದು ಎರಡನೇ ಭಾಗವಾಗಬೇಕು. ಕೇರಳದಲ್ಲಿ ಯಾವ ತರಹ ಮಾಡಿದ್ದಾರೋ, ಆ ರೀತಿ ಇಲ್ಲೂ ಮಾಡಬೇಕು. ಕೇವಲ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಬೆಳ್ತಂಗಡಿಯವರಿಗೆ ಮಾತ್ರ ಪರಿಹಾರ ನೀಡಿದರೆ ಸಾಲದು. ಪುತ್ತೂರು ಮತ್ತು ಬೆಳ್ತಂಗಡಿಯಲ್ಲೇ ಇದು ಜಾಸ್ತಿಯಾಗಿದೆ. ಮಾನ್ಯ ಶೋಭಾ ಕರಂದ್ಲಾಜೆಯವರು ಒಮ್ಮೆ ಈ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಿದ್ದರು. ಅವರು ಕೆಲವರಿಗೆ ಮಾತ್ರ ಪರಿಹಾರ ಕೊಡಿಸಿ, ಮಿಕ್ಕವರಿಗೆಲ್ಲರಿಗೂ ಕೊಡಿಸದೆ ಹಾಗೆಯೇ ನಿಲ್ಲಿಸಿಬಿಟ್ಟರು.

ಕುಮಾರಿ ಶೋಭಾ ಕರಂದ್ಲಾಜೆ :- ೨೭೧ ಜನ ಎಂಡೋಸಲ್ಫಾನ್ ಪೀಡಿತರಿಗೆ ಪರಿಹಾರ ಕೊಡಿಸಿದ್ದೇನೆ. ಬೆಳ್ತಂಗಡಿ ಸುತ್ತಮುತ್ತ ಕೊಕ್ಕಡ ಮುಂತಾದ ಆ ಭಾಗದಲ್ಲಿ ಇರುವಂತಹ ಪೀಡಿತರಿಗೆ, ಯಾರಿಗೆ ನಡೆಯಲೂ ಆಗುತ್ತಿರಲಿಲ್ಲವೋ, ಯಾರು ತೊಂದರೆಯಲ್ಲಿದ್ದರೋ, ಅವರಿಗೆ ಕರ್ನಾಟಕ ರಾಜ್ಯದಲ್ಲೇ ಮೊದಲ ಬಾರಿಗೆ ೫೦ ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡಿಸಲಾಗಿತ್ತು. ನೀವು ಹೇಳಿದಂತೆ ಕೇರಳದ ಕಾಸರಗೋಡಿನಲ್ಲಿ ಪರಿಹಾರ ಕೊಟ್ಟಿದ್ದರು. ಆದರೆ ಕರ್ನಾಟಕದಲ್ಲಿ ಇವರ ಬಗ್ಗೆ ಯಾರು ತಿರುಗಿಯೂ ನೋಡಿರಲಿಲ್ಲ. ಆ ಸಂದರ್ಭದಲ್ಲಿ ಒಂದು ಕುಟುಂಬಕ್ಕೆ ೫೦ ಸಾವಿರ ರೂ. ಗಳ ಹಣ ಮತ್ತು ಅವರಿಗೆ ತಿಂಗಳಿಗೆ ೧ ಸಾವಿರ ರೂ.ಗಳ ಮಾಸಾಶನ ಬರುವ ರೀತಿಯಲ್ಲಿ ನಾವು ಮಾಡಿದ್ದೇವೆ.

ಶ್ರೀ ಸಿದ್ಧರಾಮಯ್ಯ :- ಇನ್ನೂ ಬಹಳ ಜನರಿಗೆ ಪರಿಹಾರ ಕೊಡಬೇಕಾಗಿದೆ. ತಪಾಸಣೆಯನ್ನೆಲ್ಲಾ ಮಾಡಿ ಸುಮಾರು ೫ ಸಾವಿರ ಜನ ಪೀಡಿತರು ಇದ್ದಾರೆಂದು ಅಂದಾಜಿಸಲಾಗಿದೆ. ಅವರೆಲ್ಲರಿಗೂ ಪರಿಹಾರ ಸಿಗ ಬೇಕಲ್ಲವೇ? ಕು.ಶೋಭಾರವರು ಸುಮಾರು ೨೦೦ ಜನರಿಗೆ ಮಾತ್ರವೇ ಪರಿಹಾರ ಕೊಡಿಸಿದ್ದಾರೆ. ಎಲ್ಲಾ ೫ ಸಾವಿರ ಜನರಿಗೂ ಪರಿಹಾರ ಸಿಗ ಬೇಕಲ್ಲವೇ? ಇವರಿಗೆ ಪರಿಹಾರ ಕೊಟ್ಟ ಮೇಲೆ, ಬೇರೆಯವರಿಗೂ ಕೊಡಬೇಕಲ್ಲವೇ? ಆದ್ದರಿಂದ, ಕೇರಳ ಮಾದರಿಯಲ್ಲೇ ಇವರಿಗೂ ಪರಿಹಾರ ಕೊಡಬೇಕು. ಅದನ್ನು ನಾವು ಮಾಡುತ್ತೇವೆಂದು ಸರ್ಕಾರದವರು ಹೇಳಬೇಕು. ಇದರ ಬಗ್ಗೆ ಚಿಂತನೆ ಮಾಡುತ್ತೇವೆಂದು ಹೇಳುವುದಕ್ಕೆ ಹೋಗ ಬೇಡಿ, ಇದನ್ನು ಜಾರಿಗೆ ತರುತ್ತೇವೆಂದು ಹೇಳಿ.

ಶ್ರೀ ಅರವಿಂದ ಲಿಂಬಾವಳಿ :- ಮಾನ್ಯ ಅಧ್ಯಕ್ಷರೆ, ೫೨೨೧ ಶಂಕಿತ ಪ್ರಕರಣಗಳಿವೆ ಎಂದು ಮೊನ್ನೆ ಸರ್ವೆ ಮಾಡಿ ಪಡೆದುಕೊಂಡಿರುವ ವರದಿಯಿಂದ ನಮಗೆ ಗೊತ್ತಾಗಿದೆ. ಅವರಿಗೆ ನಾವು ಈಗ ತಪಾಸಣೆ ಮಾಡಬೇಕಾಗಿದೆ. ನಿಜಕ್ಕೂ ಅವರ ಪರಿಸ್ಥಿತಿ ಏನಿದೆ? ಎಷ್ಟು ಪ್ರಮಾಣದ ಅಂಗವಿಕಲತೆ ಬಂದಿದೆ? ಎಷ್ಟು ಪ್ರಮಾಣದಲ್ಲಿ ಸ್ತ್ರೀಯರಿಗೆ ಬಂಜೆತನ ಬಂದಿದೆ?

ಶ್ರೀ ಸಿದ್ಧರಾಮಯ್ಯ :- ತಾವು ಈಗಾಗಲೇ ತಮ್ಮ ಉತ್ತರದಲ್ಲಿ ಅದನ್ನೆಲ್ಲಾ ಹೇಳಿಬಿಟ್ಟಿದ್ದೀರಿ.

ಶ್ರೀ ಅರವಿಂದ ಲಿಂಬಾವಳಿ :- ಇಲ್ಲ.

ಶ್ರೀ ಸಿದ್ಧರಾಮಯ್ಯ :- ದಿನಾಂಕ ೧೮,೧೯ ಮತ್ತು ೨೦ ಫೆಬ್ರವರಿ ೨೦೦೯ರಂದು ನಡೆಸಿದ ತಪಾಸಣೆಯಲ್ಲಿ ಶೇಕಡ ೭೫ ಮತ್ತು ಹೆಚ್ಚು ಅಂಗ ವಿಕಲತೆ ಇರುವವರ ಸಂಖ್ಯೆ ೧೨೮ ಮತ್ತು ಶೇಕಡ ೪೦ರಿಂದ ೭೦ ಅಂಗ ವಿಕಲತೆ ಇರುವವರ ಸಂಖ್ಯೆ ೧೦೨, ಒಟ್ಟು ೨೩೦. ದಿನಾಂಕ ೮ ಮತ್ತು ೧೫ ಜುಲೈ ೨೦೧೧ರಂದು ನಡೆಸಿದ ತಪಾಸಣೆಯಲ್ಲಿ ಶೇಕಡ ೭೫ ಮತ್ತು ಹೆಚ್ಚು ಅಂಗವಿಕಲತೆ ಇರುವವರ ಸಂಖ್ಯೆ ೯೦ ಮತ್ತು ಶೇಕಡ ೪೦ರಿಂದ ೭೦ ಅಂಗವಿಕಲತೆ ಇರುವವರ ಸಂಖ್ಯೆ ೫೫, ಒಟ್ಟು ೧೪೫. ದಿನಾಂಕ ೨೧ ಸೆಪ್ಟೆಂಬರ್ ೨೦೧೨ರಂದು ನಡೆಸಿದ ತಪಾಸಣೆಯಲ್ಲಿ ಶೇಕಡ ೭೫ ಮತ್ತು ಹೆಚ್ಚು ಅಂಗವಿಕಲತೆ ಇರುವವರ ಸಂಖ್ಯೆ ೧೦೧ ಮತ್ತು ಶೇಕಡ ೪೦ರಿಂದ

೭೦ ಅಂಗವಿಕಲತೆ ಇರುವವರ ಸಂಖ್ಯೆ ೩೪, ಒಟ್ಟು ೧೩೫ ಎಂದು ನೀವು ಕೊಟ್ಟಿರುವ ಉತ್ತರದಲ್ಲೇ ಎಲ್ಲಾ ಅಂಕಿ ಅಂಶಗಳನ್ನು ನೀಡಿದ್ದೀರಿ.

ಶ್ರೀ ಅರವಿಂದ ಲಿಂಬಾವಳಿ :- ಅದು ಕರೆಕ್ಟ್. ನೀವು ಉತ್ತರದ ಮುಂದಿನ ಭಾಗವನ್ನು ನೋಡಿದರೆ, ಅದರಲ್ಲಿ ಎಲ್ಲಾ ವಿವರ ಹೇಳಿದ್ದೇವೆ. ನಾನು ತಜ್ಞ ವೈದ್ಯರ special doctors team ಮಾಡಿ ಕಳುಹಿಸಿದ್ದೇನೆ. ಅಲ್ಲಿ ದಿನಾಂಕ ೫.೧೨.೨೦೧೨ರಿಂದ ೮.೧೨.೨೦೧೨ರವರೆಗೆ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲಿ ಅವರನ್ನು ತಪಾಸಣೆ ಮಾಡಿ ಅವರು report ಅನ್ನು ಕೊಡುತ್ತಾರೆ. ಅದಾದ ಮೇಲೆ definitely ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿದ್ದರಾಮಯ್ಯ :- ಆ ವರದಿ ಬಂದ ಮೇಲೆ ಪರಿಹಾರ ಕೊಡುತ್ತೇವೆಂದು ಹೇಳಿ.

ಶ್ರೀ ಅರವಿಂದ ಲಿಂಬಾವಳಿ :- ಪರಿಹಾರ ಕೊಡುವುದಕ್ಕೋಸ್ಕರವೇ ಇದನ್ನೆಲ್ಲಾ ಮಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ :- ಅದೆಲ್ಲಾ report ಬಂದ ಮೇಲೆ ಪರಿಹಾರ ಕೊಡುತ್ತೇವೆಂದು ನಿರ್ದಿಷ್ಟವಾಗಿ ಹೇಳಿ.

ಶ್ರೀ ಅರವಿಂದ ಲಿಂಬಾವಳಿ :- ಹೌದು, ಅದನ್ನು ಕೊಡುತ್ತೇವೆ, ಸರ್.

5. ವಿಷಯ : ಕರ್ನಾಟಕ ರಾಜ್ಯದಲ್ಲಿ ಮಕ್ಕಳ ಮಾರಾಟ ಜಾಲ ಪತ್ತೆ ಹಚ್ಚಲು ಕ್ರಮ ತೆಗೆದುಕೊಂಡಿಲ್ಲದಿರುವ ಬಗ್ಗೆ.

ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್ [ಅಫಜಲಪುರ] :- ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಮಕ್ಕಳ ಮಾರಾಟ ಜಾಲವನ್ನು ಪತ್ತೆ ಹಚ್ಚುವ ಸಲುವಾಗಿ ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿಲ್ಲದಿರುವ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳ [ಗೃಹ ಮತ್ತು ಸಾರಿಗೆ ಸಚಿವರ] ಗಮನ ಸೆಳೆಯುತ್ತೇನೆ.

ಶ್ರೀ ಆರ್. ಅಶೋಕ್. (ಉಪಮುಖ್ಯ ಮಂತ್ರಿಗಳು, ಗೃಹ ಮತ್ತು ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 15–9–2011ರಂದು